# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ನಮ/ಅ.ಸ/ಅ.ಅ-5/ತಾ.ಸ-4/ಪೂ/05/2026-27
No.

ದಿನಾಂಕ : 08.05.2026
Date :

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ:4.1)

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

## ನಕ್ಷೆ ಮಂಜೂರಾತಿ ಪತ್ರ

ಇವರಿಗೆ,

**M/s Abhee Ventures Private Limited,**
**#393, First Floor, 15th Cross,**
**5th Main, Sector-6, HSR Layout,**
**Bangalore 560102.**

ಮಾನ್ಯರೆ,

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕವಡೇರಪುರ ಗ್ರಾಮದ ಸರ್ವೆ ನಂ. 19/2, 20/1, 20/2, 21/1, 21/2, 21/3, 21/4, 21/5, 21/7, 21/8, 21/9, 22(ಪಿ), 24/2, 24/3, 24/6, 24/8, 24/10(ಪಿ), 24/11, 24/12, 30, 32, ಮತ್ತು ತಿಗಳಚೌಡದೇನಹಳ್ಳಿ ಗ್ರಾಮದ ಸರ್ವೆ ನಂ. 123/1, 123/2, 124/1, 124/2, 124/3, 125/1, 125/2, 126/5, 129/1, 129/4, 129/5, 130/1, 130/2, 130/5, 130/6, 130/7, 130/8, 131/1, 131/2, 131/3 ರಲ್ಲಿನ ಒಟ್ಟು 42ಎ-29.75ಗುಂ [ಪಥಬದಲಾವಣೆ ನಂತರ 0ಎ-22ಗುಂ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಹುವಸತಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡುವ ಕುರಿತು.

ಉಲ್ಲೇಖ:- ಮಾನ್ಯ ಅಭಿಯಂತರ ಸದಸ್ಯರವರ ಆದೇಶ ಸಂಖ್ಯೆ: 99, ದಿನಾಂಕ: 23.04.2026.

******

ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕವಡೇರಪುರ ಗ್ರಾಮದ ಸರ್ವೆ ನಂ. 19/2, 20/1, 20/2, 21/1, 21/2, 21/3, 21/4, 21/5, 21/7, 21/8, 21/9, 22(ಪಿ), 24/2, 24/3, 24/6, 24/8, 24/10(ಪಿ), 24/11, 24/12, 30, 32, ಮತ್ತು ತಿಗಳಚೌಡದೇನಹಳ್ಳಿ ಗ್ರಾಮದ ಸರ್ವೆ ನಂ. 123/1, 123/2, 124/1, 124/2, 124/3, 125/1, 125/2, 126/5, 129/1, 129/4, 129/5, 130/1, 130/2, 130/5, 130/6, 130/7, 130/8, 131/1, 131/2, 131/3 ರಲ್ಲಿನ ಒಟ್ಟು 42ಎ-29.75ಗುಂ [ಪಥಬದಲಾವಣೆ ನಂತರ 0ಎ-22ಗುಂ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಈ ಕೆಳಕಂಡ ಕಟ್ಟಡಗಳಿಗೆ ನಕ್ಷೆ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತೀರಿ.

| ಕ್ರಮ ಸಂಖ್ಯೆ | ಕಟ್ಟಡಗಳು | ಅಂತಸ್ತುಗಳು | ವಸತಿ ಘಟಕಗಳು |
|---|---|---|---|
| 1 | Tower-4 | 2ತಳ+ನೆಲ+35 ಮೇಲಂತಸ್ತುಗಳು | 216 |
| 2 | Tower-5 | 2ತಳ+ನೆಲ+35 ಮೇಲಂತಸ್ತುಗಳು | 216 |

ಪುಟ ಸಂಖ್ಯೆ (2) ಕ್ಕೆ ಮುಂದುವರೆದಿದೆ.....

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

| | | | |
|---|---|---|---|
| 3 | Tower-6 | 2ತಳ+ನೆಲ+34 ಮೇಲಂತಸ್ತುಗಳು | 140 |
| 4 | Tower-11 | 2ತಳ+ನೆಲ+35 ಮೇಲಂತಸ್ತುಗಳು | 216 |
| 5 | Tower-12 | 2ತಳ+ನೆಲ+35 ಮೇಲಂತಸ್ತುಗಳು | 288 |
| | Tower-13 | 2ತಳ+ನೆಲ+35 ಮೇಲಂತಸ್ತುಗಳು | 216 |
| | Tower-14 | 2ತಳ+ನೆಲ+35 ಮೇಲಂತಸ್ತುಗಳು | 288 |
| | | **ಒಟ್ಟು** | **1580** |

ಸದರಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಅಭಿಯಂತರ ಸದಸ್ಯರವರ ಆದೇಶ ಸಂಖ್ಯೆ: **99**, ದಿನಾಂಕ: **23.04.2026** ರಂದು ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ತಾವು ನಕ್ಷೆ ಮಂಜೂರಾತಿ ಶುಲ್ಕಗಳ ಮೊತ್ತವಾದ ರೂ. **11,97,19,900/-** ಗಳನ್ನು ಪ್ರಾಧಿಕಾರದ ಆವರಣದಲ್ಲಿರುವ ಕೆನರಾ ಬ್ಯಾಂಕ್ ಚಲನ್ ಸಂಖ್ಯೆ: **GN2604813** ದಿನಾಂಕ: **28.04.2026** ರಂದು ಪ್ರಾಧಿಕಾರಕ್ಕೆ ಪಾವತಿಸಿರುತ್ತೀರಿ.

**ಆದುದರಿಂದ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕವಡೇರಪುರ ಗ್ರಾಮದ ಸರ್ವೆ ನಂ. 19/2, 20/1, 20/2, 21/1, 21/2, 21/3, 21/4, 21/5, 21/7, 21/8, 21/9, 22(ಪಿ), 24/2, 24/3, 24/6, 24/8, 24/10(ಪಿ), 24/11, 24/12, 30, 32, ಮತ್ತು ತಿಗಳಚೌಡದೇನಹಳ್ಳಿ ಗ್ರಾಮದ ಸರ್ವೆ ನಂ. 123/1, 123/2, 124/1, 124/2, 124/3, 125/1, 125/2, 126/5, 129/1, 129/4, 129/5, 130/1, 130/2, 130/5, 130/6, 130/7, 130/8, 131/1, 131/2, 131/3 ರಲ್ಲಿನ ಒಟ್ಟು 42ಎ-29.75ಗುಂ [ಪಥಬದಲಾವಣೆ ನಂತರ 0ಎ-22ಗುಂ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸರ್ವಸಮ ಟವರ್-4 ರಲ್ಲಿ 2ತಳ+ನೆಲ+35 ಮೇಲಂತಸ್ತುಗಳಲ್ಲಿ 216 ವಸತಿ ಘಟಕಗಳು, ಟವರ್-5 ರಲ್ಲಿ 2ತಳ+ನೆಲ+35 ಮೇಲಂತಸ್ತುಗಳಲ್ಲಿ 216 ವಸತಿ ಘಟಕಗಳು, ಟವರ್-6 ರಲ್ಲಿ 2ತಳ+ನೆಲ+34 ಮೇಲಂತಸ್ತುಗಳಲ್ಲಿ 140 ವಸತಿ ಘಟಕಗಳು, ಟವರ್-11 ರಲ್ಲಿ 2ತಳ+ನೆಲ+35 ಮೇಲಂತಸ್ತುಗಳಲ್ಲಿ 216 ವಸತಿ ಘಟಕಗಳು, ಟವರ್-12 ರಲ್ಲಿ 2ತಳ+ನೆಲ+35 ಮೇಲಂತಸ್ತುಗಳಲ್ಲಿ 288 ವಸತಿ ಘಟಕಗಳು, ಟವರ್-13 ರಲ್ಲಿ 2ತಳ+ನೆಲ+35 ಮೇಲಂತಸ್ತುಗಳಲ್ಲಿ 216 ವಸತಿ ಘಟಕಗಳು, ಟವರ್-14 ರಲ್ಲಿ 2ತಳ+ನೆಲ+35 ಮೇಲಂತಸ್ತುಗಳಲ್ಲಿ 288 ವಸತಿ ಘಟಕಗಳು ಒಟ್ಟು 1580 ವಸತಿ ಘಟಕಗಳ ಬಹುವಸತಿ ಕಟ್ಟಡಗಳನ್ನು ನಿರ್ಮಿಸಲು** ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ದಿನಾಂಕ: **08.05.2026** ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಈ ನಕ್ಷೆ ಮಂಜೂರಾತಿಯು ದಿನಾಂಕ: **08.05.2026** ರಿಂದ ದಿನಾಂಕ: **07.05.2028** ರವರೆಗೆ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

## -: ಷರತ್ತುಗಳು :-

1. ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕವಡೇರಪುರ ಗ್ರಾಮದ ಸ.ನಂ.19/2, 20/1, 20/2, 21/1, 21/2, 21/3, 21/4, 21/5, 21/7, 21/8, 21/9, 22, 24/2, 24/3, 24/6, 24/8, 24/10, 24/11, 24/12, 30, 32, ಮತ್ತು ತಿಗಳಚೌಡದೇನಹಳ್ಳಿ ಗ್ರಾಮದ ಸ.ನಂ.123/1, 123/2, 124/1, 124/2, 124/3, 125/1, 125/2, 126/5, 129/1, 129/4, 129/5, 130/1, 130/2, 130/5, 130/6, 130/7, 130/8, 131/1, 131/2, 131/3 ರಲ್ಲಿನ ಒಟ್ಟು 42ಎ-29.75ಗುಂ [ಪಥಬದಲಾವಣೆ ನಂತರ 0ಎ-22ಗುಂ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಠರಾವು ಸಂಖ್ಯೆ. 6.59/2025, ದಿನಾಂಕ: 25.09.2025 ರಲ್ಲಿ ಅನುಮೋದಿಸಲಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ.ಬೆಂಅಪ್ರಾ/ನಯೋಸ/DLP-38/4086/2025-26, ದಿನಾಂಕ: 13.02.2026 ರಲ್ಲಿ ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಪುಟ ಸಂಖ್ಯೆ (3) ಕ್ಕೆ ಮುಂದುವರೆದಿದೆ.....

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

2. Bangalore Electricity Supply Company Limited ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: CEBRAZ/SEO/AEE-1/25-26/12021-24, ದಿನಾಂಕ: 07.03.2026 ರಲ್ಲಿ ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3. Airport Authority of India ನೀಡಿರುವ ನಿರಾಪೇಕ್ಷಣಾ ಪತ್ರ ಸಂಖ್ಯೆ. HOSU/SOUTH/B/101725/2105927, Dated: 27.11.2025 ರಲ್ಲಿ ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

4. BSNL ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ. DGM(CM) BGTD/NOC for High rise/2025-26/134, dated at Bangalore the 11.11.2025. ರಲ್ಲಿ ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

5. ರಸ್ತೆ ಅಗಲದ ವಿಸ್ತೀರ್ಣ 3213.35 ಚ.ಮೀ ಪ್ರದೇಶವನ್ನು ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪುಕ್ಕಟೆಯಾಗಿ ಸ್ಥಳೀಯ ಪಂಚಾಯಿತಿಗೆ ಪ್ರಾರಂಭಿಕ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವ ಮುನ್ನಾ ಹಸ್ತಾಂತರಿಸತಕ್ಕದ್ದು.

6. ವಸತಿ ಕಟ್ಟಡದ ನಕ್ಷೆ ಮಂಜೂರಾತಿಯನ್ನು, ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ ಮತ್ತು ಬಯಲುಜಾಗ, ರಸ್ತೆ ಪ್ರದೇಶವನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸಂಬಂಧಿತ ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ಹಸ್ತಾಂತರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

7. ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಕಾರ್ಯಾಲಯದ ನಡವಳಿ ಆದೇಶ ಸಂಖ್ಯೆ: ಎಲ್.ಎನ್.ಡಿ(ಎ)/ಸಿ.ಆರ್ 98/25-26, ದಿನಾಂಕ: 02.09.2025 ರಲ್ಲಿ ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

8. ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ಯಾವ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲು ಜಾಗ, ಸಿ.ಎ., ರಸ್ತೆಗಳು, ಸರ್ಫೇಸ್ ಪಾರ್ಕಿಂಗ್ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವಂತಿಲ್ಲ.

9. ಬಂಡಿದಾರಿ / ರಾಜ ಕಾಲುವೆ / ಮಳೆ ನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದಲ್ಲಿ, ಆ ಪ್ರದೇಶವನ್ನು ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.

10. ಅಭಿವೃದ್ಧಿದಾರರು ಭದ್ರತಾ ಸಿಬ್ಬಂಧಿಯವರನ್ನು ನೇಮಿಸಿ ಕಟ್ಟಡ ನಿರ್ಮಾಣದ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ವಾಹನ ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು, ಹಾಗೂ ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ವತ್ತಿನ ಒಳಭಾಗದಲ್ಲಿ ಅಳವಡಿಸಿ ನಿರ್ವಹಿಸುವುದು.

11. ಅರ್ಜಿದಾರರು ಶಾಸನಬದ್ಧ ಸಂಸ್ಥೆಗಳಿಗೆ, ಬಿಡಿಎ / ಬಿಬಿಎಂಪಿ / ನಗರ ಸಭೆ / ಪಂಚಾಯತ್ ಗೆ ಯಾವುದಾದರೂ ಬಾಕಿ ಶುಲ್ಕಗಳನ್ನು ಪಾವತಿಸಬೇಕಿದ್ದಲ್ಲಿ ಅಂತಹ ಸಂಸ್ಥೆಗಳು ವಿಧಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

12. ಮಳೆ ನೀರು ಕೊಯ್ಲನ್ನು ನಿಯಮಾನುಸಾರ ಅಳವಡಿಸುವುದು.

13. ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಳಿಗಾಗಿ ಅಳವಡಿಸುವುದು.

14. ಕಟ್ಟಡ ನಿರ್ಮಾಣ ಸಮಯದಲ್ಲಿ ಸುತ್ತಮುತ್ತಲಿನ ಪ್ರದೇಶಕ್ಕೆ ಅನಗತ್ಯ ಶಬ್ದ ಮಾಲಿನ್ಯ ತಡೆಗಟ್ಟುವ ಸಂಬಂಧ ನಿರ್ಮಾಣದ ಹೊರಭಾಗಗಳಿಗೆ ಅಗತ್ಯ ರಕ್ಷಣಾ ಕವಚವನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

15. ಅರ್ಜಿದಾರರು ಪ್ರಶ್ನಿತ ಪ್ರದೇಶದಲ್ಲಿ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.

16. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದು.

17. ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ನೈರ್ಮಲ್ಯ ಶುದ್ಧೀಕರಣ ಘಟಕವನ್ನು (S.T.P) ಅಳವಡಿಸಿ ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು ಮತ್ತು ಇದರಿಂದ ಉತ್ಪತ್ತಿಯಾಗುವ Sewage ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿವೆ/ಹೊಳೆಗೆ ಬಿಡತಕ್ಕದಲ್ಲ.

18. ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬಧ್ಧರಾಗಿರತಕ್ಕದ್ದು.

19. ಅಭಿವೃದ್ಧಿದಾರರು ಕಟ್ಟಡಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

20. ಅಭಿವೃದ್ಧಿದಾರರು ಟ್ರಾನ್ಸ್ ಫಾರ್ಮರ್ ಗಾಗಿ ಗುರುತಿಸಿರುವ ಪ್ರದೇಶದಲ್ಲಿ ಅಳವಡಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

ಪುಟ ಸಂಖ್ಯೆ (4) ಕ್ಕೆ ಮುಂದುವರೆದಿದೆ.....

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

21. ಅಭಿವೃದ್ಧಿದಾರರು ಕಟ್ಟಡದ ಸುರಕ್ಷತೆ ಹಾಗೂ ಭದ್ರತೆಯ, ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಸಂಪೂರ್ಣವಾಗಿ ಜವಬ್ದಾರರಾಗಿರತಕ್ಕದ್ದು. ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಕಾರ್ಮಿಕರು ಹಾಗೂ ನಿರ್ಮಾಣದ ಬಗ್ಗೆ ಎಲ್ಲಾ ಸೂಕ್ತ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು, ನಿರ್ಮಾಣ ಸಮಯದಲ್ಲಿ ಯಾವುದೇ ತರಹದ ಅನಾಹುತ ಅಥವಾ ಪ್ರಾಣ ಹಾನಿಯಾಗದಂತೆ ಕಟ್ಟುನಿಟ್ಟಿನ ಎಚ್ಚರವಹಿಸತಕ್ಕದ್ದು, ಯಾವುದೇ ತರಹದ ಅನಾಹುತಕ್ಕೆ ಗುತ್ತಿಗೆ ಪಡೆದ ನಿರ್ಮಾಣದಾರರು ನೇರ ಜವಬ್ದಾರರಾಗಿರುತ್ತಾರೆ.

22. ಅಭಿವೃದ್ಧಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ ಕಟ್ಟಡದ ಅನುಪಯುಕ್ತ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ಅನುಗುಣವಾಗಿ ಬ್ಯಾರಿಕೇಡಿಂಗ್ ನ್ನು ಅಳವಡಿಸಿ ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು.

23. ಯೋಜನೆಯಲ್ಲಿ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಹಾಗೂ ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು ಹಾಗೂ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

24. ಕಟ್ಟಡದ ಕಾಮಗಾರಿ ಆರಂಭಿಸುವ ಮುನ್ನ ಅರ್ಜಿದಾರರು ಲೈಸನ್ಸ್ ಅನ್ನು ಸ್ಥಳೀಯ ಸಂಸ್ಥೆಯಿಂದ ಪಡೆಯತಕ್ಕದ್ದು.

25. ಅಭಿವೃದ್ಧಿದಾರರ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ / ದಾಖಾಲಾತಿ ನೀಡಿದ್ದಲ್ಲಿ, ನಕ್ಷೆ ಅನುಮೋದನೆಯನ್ನು ರದ್ದುಪಡಿಸಲಾಗುವುದು.

26. ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ. ಆದುದರಿಂದ ನಿರ್ಮಾಣ ಸಮಯದಲ್ಲಿ ಎಲ್ಲಾ ಜಾಗ್ರತ / ಸುರಕ್ಷಿತ ಕ್ರಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳತಕ್ಕದ್ದು.

27. ಅಭಿವೃದ್ಧಿದಾರರು ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯನ್ನು ಅವಲಂಬಿಸದೆ ನೀರಿನ ಸರಬರಾಜಿಗಾಗಿ ತಮ್ಮ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

28. ಅಭಿವೃದ್ಧಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಹಾಗೂ ಸದರಿ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

29. ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Dry waste ಮತ್ತು Wet waste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

30. ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

31. ಪ್ರಶ್ನಿತ ಪ್ರದೇಶದಲ್ಲಿ 240.0ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿ ಗಿಡ, ಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು.

32. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

33. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ: 14604/2024 ರಲ್ಲಿ ವಿಧಿಸಿರುವ ಎಲ್ಲಾ ಆದೇಶ / ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

34. ಪ್ರಾಧಿಕಾರಕ್ಕೆ / ಸರ್ಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುವ ಉದ್ಯಾನವನ / ಸಿ.ಎ. ನಿವೇಶನ / ಬಯಲು ಜಾಗಗಳಲ್ಲಿ ಪ್ರಾಧಿಕಾರಕ್ಕೆ / ಸರ್ಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿದೆ ಎಂಬ ನಾಮಫಲಕವನ್ನು ಅಳವಡಿಸತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಯಥಾ ಪ್ರತಿಯನ್ನು:-

- ಕಾರ್ಯಪಾಲಕ ಅಭಿಯಂತರು, ಪೂರ್ವ ವಿಭಾಗ, ಬೆಂ.ಅ.ಪ್ರಾ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.